Intermediate  Kannada First year model Question paper

Q.P. Code ( Gen . & Vocl.):-    0107

Subject :-    Kannada

Medium :-    ----

Paper :-    1

Time :-    3 Hours    Max.Marks : 100 M

Instructions to the candidate :

I . ಈ ಕೆಳಗಿನ 3 ಪದ್ಯಗಳಲ್ಲಿ ಒಂದಕ್ಕೆ ಭಾವಾರ್ಥಬರೆಯಿರಿ.    1X6=6

ಆನುಂ ದುಶ್ಯಾಸನನುಂ

ನೀನುಂ ಮೂವರೇ ದಲಾತನುಂ ಕಳಿದ ಬಳಿ

ಕ್ಕಾನುಂ ನೀನೆ ದಲೀಗಳ್

ನೀನುಮಗಲ್ದೆತ್ತವೋದೆಯಂಗಾಧಿಪತೀ

***** ಅಥವಾ *****

ನವಿಲಿಗೆ ಚಿತ್ರಬರೆದವರು ಯಾರು

ಪವಳದ ಲತೆಗೆ ಕೆಂಪಿಟ್ಟವರು ಯಾರು

ಸವಿಮಾತಿನರಗಿಳಿಗೆ ಹಸುರು ಬರೆದವರು ಯಾರು

ಅವನೆ ಸಲಹುವನು ಇದಕೆ ಸಂಶಯವಿಲ್ಲ

***** ಅಥವಾ *****

ಹಣ್ಣಾಗಬೇಕು ಮಗು

ಮೈಯೆಲ್ಲಮಾಗಿ ಹಣ್ಣಿನ ಸುಕ್ಕು ಬರುವವರೆಗೆ

ಪಕ್ವತನ ಬಿರಿದ ಬಾಳೆ ಹಣ್ಣಿದೆಯೆಲ್ಲ

ದರ ಹಾಗೇ ಕೊಂಚ ಬಾಗಬೇಕು.

II. ಈ ಕೆಳಗಿನ ಮೂರು ಪ್ರಶ್ನಗಳಲ್ಲಿ ಒಂದನ್ನು ಕುರಿತು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿರಿ 1X6=6

1.ಲೋಕದ ಭಜನೆಯಲ್ಲಿ ಸಿಲುಕಿದವರಿಗೆ ಮುಕ್ಥಿ ಇಲ್ಲ ಎಂಬುದನ್ನು ಅಕ್ಕನ ಹೇಗೆ ನಿರೂಪಿಸಿದ್ದಾಳೆ.?

2.ಕರುಣಾಳು ರಾಘವನಲ್ಲಿ ತಪ್ಪಿಲ್ಲ ಎಂಬ ಸೀತೆಯ ನಿಲುವನ್ನು ವಿಶ್ಲೇಷಿಸಿ.

3.ನಾಡಜನರ ಗತವೈಭವದ ಕನಸನ್ನು ಕವಿ ಹೇಗೆ ವಿಡಂಭಿಸಿದ್ದರೆ.?

III.ಈ ಕೆಳಗಿನ ಮೂರು ಪ್ರಶ್ನೆಗಳಲ್ಲಿ ಒಂದನ್ನು ಕುರಿತು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿರಿ. 1X6=6

1.ಜ್ಯೋತಿಷ್ಯ ಏಕೆ ವಿಜ್ಞಾನವಾಗಲಾರದು.? ವಿವರಿಸಿ.

2.ಬದಲಾದ ಶಹಬಾದನ್ನು ಲೇಖಕರು ಹೇಗೆ ನಿರೂಪಿಸಿದ್ದಾರೆ.?

3.ನಿರಾಕರಣೆ ಕಥೆಯಲ್ಲಿ ಬರುವ ಶಕುಂತಲೆ ವ್ಯಕ್ತಿತ್ವವನ್ನು ವಿವರಿಸಿ.?

IV. ಈ ಕೆಳಗಿನ ಮೂರು ಪ್ರಶ್ನೆಗಳಲ್ಲಿ ಒಂದನ್ನು ಕುರಿತು ಇಪ್ಪತ್ತು ವಾಕ್ಯಗಳಲ್ಲಿ ಉತ್ತರಿಸಿರಿ. 1X6=6

1.ಭೋಳೆಶಂಕರನ ಅಣ್ಣಂದಿರೇ ವಾಸಿ ಎಂದು ಪಿಶಾಚಿ ಹೇಳಲು ಕಾರಣವೇನು.?

2.ಯುದ್ಧ ಮಾಡಲು ಸೈನಿಕರು ಏಕೆ ನಿರಾಕರಿಸುತ್ತಾರೆ.?

3.ತಲೆಯಿಂದ ಕೆಲಸಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.?

V. ಈ ಕೆಳಗಿನ ಐದರಲ್ಲಿ ಯಾವುದಾದರು ಎರಡಕ್ಕೆ ಸಂಧರ್ಭಸೂಚಿಸಿ ವಿವರಿಸಿ 2X3 = 6

1.ಕ್ರಾಂತಿಭಾನು ಹೊಳೆದು ಹೊಂಬೆಳಕ ಚಲ್ಲುದೆಂದಿಗೆ

2.ನಗುವ ಚಂದಿರ ಕೈಗಂಟಿಕೊಳ್ಳುತಿದ್ದಾನೆ

3.ಹೂ ತರುವೆನೇ ನಿನ್ನ ಹೆಸರಿಗೆ

4.ನಮ್ಮ ಪಾಲಿಗೆ ನಿತ್ಯ ಹಬ್ಬವಾಗಿರುತ್ತಿತ್ತು

5.ನಾನು ತಾಯಿಯ ಕರ್ತವ್ಯ ನಿರ್ವಹಿಸಲೇಬೇಕು

VI.ಈ ಕೆಳಗಿನ ಐದು ಕವಿ / ಲೆಖರಲ್ಲಿ ಇಬ್ಬರ ಪರಿಚಯ ಬರೆಯಿರಿ 2X3 = 6

1.ಲಕ್ಷೀಶ 2.ಕುವೆಂಪು 3.ಹೆಚ್.ಎಲ್.ಪುಷ್ಪ 4.ಲಕ್ಕೂರು ಸಿ.ಆನಂದ 5.ರನ್ನ

VII.ಈ ಕೆಳಗಿನ ಐದು ಪ್ರಶ್ನೆಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ 2X3 = 6

1.ಕಾಲು ಮತ್ತು ದೇಹವನ್ನು ಯಾವುದಕ್ಕೆ ಹೋಲಿಸಲಾಗಿದೆ.?

2.ಕಣ್ಣು ಹಾಗು ಕರ್ಣಗಳಿಗೆ ಶೃಂಗಾರ ಯಾವುದು.?

3.ವೃಕ್ಷವನ್ನು ಆದಿಕೇಶವ ಹೇಗೆ ಸಲಹುತ್ತಾನೆ.?

4.ನಾಡಿನ ಹೊರಗಿನ ಮತ್ತು ಒಳಗಿನ ಕಳ್ಳರು ಯಾರು.?

5.ಭೂಮಿ ಕಂಪಿಸಿದಾಗ ಏನಾಯಿತು.?

VIII.ಈ ಕೆಳಗಿನ ಐದು ಪ್ರಶ್ನೆಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ 2X3 = 6

1.ಹುಡುಗನ ಯಾವ ಮಾತಿಗೆ ವೈದ್ಯಾಧಿಕಾರಿ ಬೆಪ್ಪಾಗಿ ಹೋದ.?

2.ಮಾಸ್ತರರು ಬಾಡಿಗೆ ಮನೆಯನ್ನು ಹೇಗೆ ಖರೀದಿಸಿದ್ದರು.?

3.ಶಕುಂತಲೆ ತನ್ನ ಬದುಕು ಏನಾಗಿದೆಯಂದು ಯೋಚಿಸುತ್ತಾಳೆ.?

4.ವಿಜ್ಞಾನದ ಸಿದ್ಧಾಂತಗಳು ಹೇಗೆ ರೂಪುಗೊಳ್ಳುತ್ತವೆ.?

5.ಹುಲಿಯ ಗುಹೆಯಲ್ಲಿ ನಾಪಿತ ಏನನ್ನು ಕಂಡನು.?

IX. ಈ ಕೆಳಗಿನ ಐದು ಪ್ರಶ್ನೆಗಳಲ್ಲಿ ಎರಡಕ್ಕೆ ಸಂಕ್ಷಿಪ್ತವಾಗಿ ಉತ್ತರಿಸಿ 2X3 = 6

1.ಸಾವ್ಕಾರಣ್ಣನು ತನ್ನ ಸಹೋದರರಿಗೆ ಆಸ್ಥಿಯನ್ನು ಹೇಗೆ ಹಂಚಿದನು.?

2.ಕೋಡಂಗಿ ತಾನು ಬೆಳಗಿನಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ.?

3.ಸೈತಾನನ ಆಗಮನವನ್ನು ಭಾಗವತ ಹೇಗೆ ತಿಳಿಸಿದ್ದಾನೆ.?

4.ಭೋಳೆಶಂಕರ ಏನೆಂದು ಡಂಗುರ ಸಾರಿಸುತ್ತಾನೆ.?

5.ಸೈತಾನನು ಮೂರು ಪಿಶಾಚಿಗಳನ್ನು ಭೂಲೋಕಕ್ಕೆ ಕಳುಹಿಸಿದ್ದು ಏಕೆ.?

X. ಈ ಕೆಳಗಿನ ಮೂರು ಪ್ರಶ್ನೆಗಳಲ್ಲಿ ಒಂದನ್ನು ಕುರಿತು ಪತ್ರ ಬರೆಯಿರಿ. 1X6=6

1.ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ನೀಡುವಂತೆ ಕಾಲೇಜಿನ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ.

2.ಚರಂಡಿ ನಿರ್ಮಾಣ ಮಾಡಲು ಮಂಡಲ ಪಂಚಾಯಿತಿ ಅಧ್ಯಕ್ಷರಿಗೆ ಪತ್ರ ಬರೆಯಿರಿ.

3.ನಿಮ್ಮ ಗೆಳೆಯ / ಗೆಳತಿಗೊಂದು ಪತ್ರ ಬರೆಯಿರಿ

XI. A) ಈ ಕೆಳಗಿನ ಹತ್ತು ಸಂಧಿ ಪದಗಳಲ್ಲಿ ನಾಲ್ಕಕ್ಕೆ ಸಂಧಿ ಬಿಡಿಸಿ ಹೆಸರಿಸಿ 4X2=8

1.ನೆನಪಿಲ್ಲ 2.ಶಾಲೆಯಲ್ಲಿ 3.ಚಳಿಗಾಲ 4.ಧರ್ಮವನ್ನು 5.ಚಿತ್ತಾಕರ್ಷ

6.ವೇದೋಕ್ತಿ 7.ವಾಙ್ಮಯ 8.ಜನಾನುರಾಗಿ 9.ಪರಾಕರ್ಷ 10.ದಿಗಂತ

B) ಈ ಕೆಳಗಿನ ಎಂಟು ಸಮಾಸ ಪದಗಳಲ್ಲಿ ಮೂರಕ್ಕೆ ಸಮಾಸ ಬಿಡಿಸಿ ಹೆಸರಿಸಿ 3X2=6

1.ಅರಮನೆ 2.ಮುಕ್ಕಣ್ಣ 3.ಬೆಳ್ದಾವರೆ 4.ಕೆಂಜಡಿಗ

5.ಗಜಾಶ್ವರಥಗಳು 6.ಒಗ್ಗಟ್ಟು 7.ಧರ್ಮಶಾಲೆ 8.ಕೈತೊಳೆ

C) ಈ ಕೆಳಗಿನ ಎಂಟು ಪದಗಳಲ್ಲಿ ಐದಕ್ಕೆ ಅರ್ಥ ಬರೆಯಿರಿ 1X5=5

1.ತಂತ್ರಿ 2.ಮರಡಿ 3.ಸ್ತಬ್ದ 4.ಕರಂಡ

5.ಕುಳ್ಳು 6.ಅಸಂಗತ 7.ಚೌಲ 8.ಎಸರು

XII. ಈ ಕೆಳಗಿನವುಗಳಲ್ಲಿ ಒಂದನ್ನು ಕುರಿತು ಪ್ರಭಂಧ ಬರೆಯಿರಿ 1X6=6

1.ಕಂಪ್ಯೂಟರ್ ನ ಉಪಯೋಗಗಳು

2.ಓದು ಒಕ್ಕಾಲು , ಬುದ್ದಿ ಮುಕ್ಕಾಲು

3.ರಾಷ್ಟ್ರೀಯ ಹಬ್ಬಗಳ ಮಹತ್ವ

XIII. ಈ ಕೆಳಗಿನ ಎಲ್ಲಾ ಪ್ರಶ್ನಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 5X1=5

1.ಅಲ್ಲಮ ಪ್ರಭುವಿನ ಅಂಕಿತ ಯಾವುದು.?

2.ಅಕ್ಕನು ಹೇಳುವ ತೊಡರು ಯಾವುದು.?

3.ಭೂದೇವಿಯ ಮಗಳು ಯಾರು.?

4.ಚಲದ ಚಂಡಿ ಯಾರು.?

5.ಮಗುವು ಯಾವುದರ ಹಾಗೆ ಬಾಗಬೇಕು.?

XIV. ಈ ಕೆಳಗಿನ ಎಲ್ಲಾ ಪ್ರಶ್ನಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 5X1=5

1.ವೈದ್ಯಾಧಿಕಾರಿಯ ಜ್ಞಾಪಕಕ್ಕೆ ಬಂದದ್ದು ಏನು.?

2.ಜಾತಕಗಳನ್ನು ಹೇಗೆ ಬರೆಯಲಾಗುತ್ತದೆ.?

3.ಶಾಸ್ತ್ರೀ ಮಾಸ್ತರರ ಹೆಂಡತಿ ಹೆಸರೇನು.?

4.ರಕ್ಷಾ ಕರಂಡವು ಯಾರ ಕೈಯಿಂದ ಕೆಳಗೆ ಬಿದ್ದಿತು.?

5.ವಿಪ್ರನು ಮರದಿಂದ ಎಲ್ಲಿಗೆ ಬಿದ್ದನು.?

XV. ಈ ಕೆಳಗಿನ ಎಲ್ಲಾ ಪ್ರಶ್ನಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ 5X1=5

1.ಭೋಳೆಶಂಕರನ ಊರು ಯಾವುದು.?

2.ಪಿಶಾಚಿಗಳು ಯಾರ ಹೆಸರು ಕೇಳಿದರೆ ಹೆದರುತ್ತವೆ.?

3.ರಾಜಕುಮಾರಿಗೆ ಬಂದರೋಗ ಯಾವುದು.?

4.ಕತ್ತಲೆಯ ನಿಜ ಜನಕನು ಯಾರು.?

5.ಸೈನಿಕರು ಯಾವುದಕ್ಕೆ ಜಯವಾಗಲೆಂದರು.?